ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Welnesday, 28th January 1970

The House met in the Assembly Chamber, Vidhana Soudha, Bangalore, at One of the Clock.

Mr. SPEAKER (SRI S. D. KOTHAVALE) in the Chair

STARRED QUESTIONS

(to which oral answers were given)

Pilgrimage Centres having Government Choultries

62. Sri C. K. RAJAIAH SHETTY (Chicknaikanahalli).—

Will the Minister for Revenue be pleased to state :—

(*a*) the names of pilgrimage Centres where the Government has got choultries at present and the names of places where Government has proposed to construct new choultries;

(*b*) the cost of the existing choultries and the cost of proposed new choultries ?

Sri H. V. KOUJALGI (Minister for Revenue).—

(*a*) (i) Tirumalai-Tirupathi (Andhra Pradesh).

(ii) Varanasi (Uttar Pradesh).

Government has proposed to construct a choultry at Srisailam (Andhra Pradesh).

(*b*) (i) The cost of the recently constructed choultry Tirumalai-Tirupathi (Mysore Pravasi Soudha) Rs. 19.8 laskhs.

(ii) Old chou tries at Tirumalai and Varanasi — Constructed decades back. Hence the cost cannot be furnished at this stage.

The cost of the proposed new choultry at Srisailam is Rs. 12 lakhs

ಶ್ರೀ ಸಿ. ಕೆ. ರಾಜ್ಯಯ್ಯ ಶೆಟ್ಟಿ.—ಈ ಚತ್ರಗಳನ್ನು ಯಾವ ಫಂಡಿನಿಂದ ಕಟ್ಟಿಸುತ್ತಾರೆ ಸ್ವಾಮಿ, ಮುಜರಾಯಿ ಫಂಡಿನಿಂದ ಕಟ್ಟಿಸುತ್ತಾರೆಯೇ ?

Sri H. V. KOUJALGI.—These are constructed by the Muzrai Department.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ದೇಶದಲ್ಲಿ ಅನೇಕ ದೇವಸ್ಥಾನಗಳು ರಿಪೇರಿ ಇಲ್ಲದೆ ಹಾಳಾಗುತ್ತಾ ಇರುವಾಗ ಹೊರಗಡೆ ಛತ್ರಗಳನ್ನು ಕಟ್ಟುತ್ತಿರುವುದು ಉಚಿತವೇ ?

ಶ್ರೀ ಎಚ್. ವಿ. ಕೌಜಲಗಿ.—ಹೊರಗಡೆ ಈ ಏನು ಕ್ಷೇತ್ರಗಳಿವೆ, ಅಲ್ಲಿಗೆ ನಮ್ಮ ಜನರು ಹೋಗುತ್ತಿರುವುದರಿಂದ, ಅವರ ಅನುಕೂಲಕ್ಕೋಸ್ಕರ ಇವುಗಳನ್ನು ಕಟ್ಟಿದ್ದೇವೆ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ನಿಮ್ಮ ದೇವರಲ್ಲಿ ನೀವು ನಂಬಿಕೆ ಇಡದೆ ಹೊರಗಡೆ ಇರುವ ದೇವರಲ್ಲಿ ನಂಬಿಕೆ ಜನರಲ್ಲಿ ಬರಲಿ ಎಂಬ ಉದ್ದೇಶವೇ ?

ಶ್ರೀ ಎಚ್. ವಿ. ಕೌಜಲಗಿ.—ಅವುಗಳನ್ನು ಕಟ್ಟಿಸುವುದರಿಂದ ಸರ್ಕಾರಕ್ಕೆ ಯಾವ ತರದ ಲುಕ್ಸಾನೂ ಇಲ್ಲ. ಅದರಿಂದ ಸರ್ಕಾರಕ್ಕೆ ಆದಾಯ ಬರುತ್ತದೆ.

ಶ್ರೀ ಎನ್. ಚಿಕ್ಕೇಗೌಡ.—ತಾವು ತಿರುಮಲೆಯಲ್ಲಿ ಕಟ್ಟಿಸಿರತಕ್ಕ ಚೌಲ್ಟ್ರಿಯಲ್ಲಿ ನೀರು ಇಲ್ಲದೆ ಮತ್ತು ಇತರ ಸೌಲಭ್ಯಗಳಿಲ್ಲದೆ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದರೂ, ಇಪ್ಪತ್ತು ವರ್ಷವಾದರೂ ಅದನ್ನು ಪೂರೈಸುವುದಕ್ಕೆ ಸರ್ಕಾರಕ್ಕೆ ತೊಂದರೆ ಏನು ? ಮತ್ತು ಅದನ್ನು ದೇವಸ್ಥಾನದ ಕಡೆಯಿಂದಲಾದರೂ ಒದಗಿಸಿಕೊಡುವುದಕ್ಕೆ ಇರುವ ತೊಂದರೆ ಏನು ?

ಶ್ರೀ ಎಚ್. ವಿ. ಕೌಜಲಗಿ.—ತಿರುಮಲೆ ಚೌಲ್ಟ್ರಿಯನ್ನು ಹೊಸದಾಗಿ ಕಟ್ಟಿಸಿದ್ದೇವೆ. ಅಲ್ಲಿ ನೀರು ಸಾಕಷ್ಟು ಸಿಗುವುದಿಲ್ಲ. ಈಗ ಎರಡು ಬೋರ್‌ವೆಲ್ ಮೋಟಿನ್ ಹಾಕಲಿಕ್ಕೆ ಹತ್ತಿದ್ದೇವೆ. ಮತ್ತು ಅಲ್ಲಿ ಆಂಧ್ರ ಸರ್ಕಾರದ ಒಂದು ಟ್ಯಾಂಕೂ ಇದೆ. ಅಲ್ಲಿಂದ ಕೂಡ ನೀರು ಉಪಯೋಗಿಸಿಕೊಳ್ಳಲು ಪತ್ರ ವ್ಯವಹಾರ ನಡೆಸಿದ್ದೇವೆ. ಈಗ ಮೊದಲಗಿಂತ ಎಷ್ಟೋ ಸುಧಾರಿಸಿದೆ.

ಶ್ರೀ ಬಾಪು ಗೌಡ.—ಕಲ್ಬುರ್ಗಿಯಲ್ಲಿ ಚನ್ನಬಸಪ್ಪ ದೇವಸ್ಥಾನ ಮತ್ತು ಇನ್ನೊಂದು ದೊಡ್ಡ ದೇವಸ್ಥಾನ ಇದೆ. ಅಲ್ಲಿ ಪ್ರತಿ ವರ್ಷ ಲಕ್ಷಾಂತರ ಜನರು ಬರುತ್ತಿದ್ದಾರೆ. ಅಲ್ಲಿ ಕೂಡ ಚೌಲ್ಟ್ರಿ ಕಟ್ಟುವುದಕ್ಕೆ ವಿಚಾರ ಮಾಡುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಎಲ್ಲಾ ಕ್ಷೇತ್ರಗಳಲ್ಲಿ ಕಟ್ಟಬೇಕೆಂದು ಸರ್ಕಾರದ ವಿಚಾರವಲ್ಲ. ಯಾವ ಯಾವ ಕ್ಷೇತ್ರದಲ್ಲಿ ಪ್ರತಿ ದಿವಸ ಹೆಚ್ಚು ಜನರು ಬರುತ್ತಾರೆ, ಅಥವಾ ಕಾಲ ಕಾಲಕ್ಕೆ ಹೋಗುತ್ತಾರೆ, ಅಲ್ಲಿ ಮಾತ್ರ ವಿಚಾರ ಮಾಡುತ್ತಿದ್ದೇವೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ತಿರುಮಲೆ ತಿರುಪತಿಯಲ್ಲಿ ಕಟ್ಟಿಸಿರತಕ್ಕಂತಹ ಛತ್ರದಲ್ಲಿ ಇಲ್ಲಿಯವರೆಗೆ ಎಷ್ಟು ಆದಾಯ ಬಂದಿದೆ?

ಶ್ರೀ ಎಚ್. ವಿ. ಕೌಜಲಗಿ.—ಅಲ್ಲಿ ಪೀಕ್ ಪೀರಿಯಡಿನಲ್ಲಿ ನರಾನರಿ ಒಂದು ಸಾವಿರ ರೂಪಾಯಿ ಬರುತ್ತದೆ. ನಾನ್ ಪೀಕ್ ಪೀರಿಯಡ್ಡಿನಲ್ಲಿ 400-500 ರೂಪಾಯಿ ಬರುತ್ತದೆ.

ಶ್ರೀ ಜಿ. ಆರ್. ಹಾಲಸ್ವಾಮಿ.—ನಮ್ಮ ರಾಜ್ಯದಲ್ಲಿ ಏನಾದರೂ ಯಾತ್ರಾ ಸ್ಥಳಗಳಲ್ಲಿ ಛತ್ರಗಳನ್ನು ಕಟ್ಟಿಸಲು ಉದ್ದೇಶಿಸಿದ್ದೀರಾ ?

ಶ್ರೀ ಎಚ್. ವಿ. ಕೌಜಲಗಿ.—ವಿಚಾರ ಇದೆ, ಇನ್ನೂ ನಿರ್ಣಯ ತೆಗೆದುಕೊಂಡಿಲ್ಲ.

ಶ್ರೀ ಎನ್. ಎ. ಚನ್ನೇಗೌಡ.—ಶ್ರೀಶೈಲದಲ್ಲಿ 12 ಲಕ್ಷ ರೂಪಾಯಿಗಳ ಛತ್ರ ಕಟ್ಟಿಸಲು ಉದ್ದೇಶಿಸಲಾಗಿದೆಯೆಂದು ಹೇಳಿದ್ದೀರಿ. ಅವನ್ನು ಕಟ್ಟಿಸಲು ಜನರಿಂದ ಏನಾದರೂ ಬೇಡಿಕೆ ಬಂದಿದೆಯೇ, ಅಥವಾ ಸರ್ಕಾರವೇ ಕಟ್ಟಿಸುತ್ತಾರೆಯೇ? ಮತ್ತು ಇದುವರೆಗೆ ಮೇಲ್ಕೋಟೆಯಲ್ಲಿ ಕಟ್ಟಿಸಬೇಕೆಂದಿರುವ ಛತ್ರದ ವಿಚಾರ ಏನಾಯ್ತು ?

ಶ್ರೀ ಎಚ್. ವಿ. ಕೌಜಲಗಿ.—ಶ್ರೀಶೈಲದಲ್ಲಿ ಕಟ್ಟಿಸಲಿಕ್ಕೆ ನಮ್ಮ ಸಂಸ್ಥಾನದವರ ಬೇಡಿಕೆಯೂ ಇತ್ತು.

ಶ್ರೀ ಎಂ. ಕಲ್ಯಾಣ್ ರಾವ್.—ತಿರುಮಲೆ ಛತ್ರ ಯಾತ್ರಿಕರು ಇರುವುದಕ್ಕೆ ಯೋಗ್ಯವಾಗಿ ಇಲ್ಲದ ರೀತಿಯಲ್ಲಿ ಇದೆ. ಹೀಗೆ ಇರುವುದಕ್ಕೆ ಯಾರು ಕಾರಣರು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಈಗಿನ ಪರಿಸ್ಥಿತಿಯಲ್ಲಿ ಯಾತ್ರಿಕರಿಗೆ ಅನುಕೂಲವಾಗುವ ಹಾಗೆ ಕಟ್ಟಿದೆ.

ಶ್ರೀ ಎಂ. ನಾಗಪ್ಪ.—ಶ್ರೀಶೈಲದ ಹತ್ತಿರ ಚೌಲ್ಟ್ರಿ ಕಟ್ಟಿಸಬೇಕೆಂದು ಹೋದ ವರ್ಷ ಮಾನ್ಯ ಮುಖ್ಯ ಮಂತ್ರಿಯವರು ಘೋಂಡೇಶನ್ ಹಾಕಿದ್ದರು. ಇದುವರೆಗೂ ಯಾವ ಕಾರ್ಯಕ್ರಮವೂ ಆಗಿಲ್ಲ. ಆದ್ದರಿಂದ ಅದು ಯಾವ ಹಂತದಲ್ಲಿದೆ? ಮತ್ತು ಇಲ್ಲಿಗೆ ಉತ್ತರ ಭಾಗದ ಜನರು ಮತ್ತು ಶೋರಾಪುರದ ಅನೇಕ ಜನರು ದರ್ಶನ ಕೊಡುವುದರಿಂದ, ಜಾಗ್ರತೆಯಾಗಿ ಇದನ್ನು ಕಟ್ಟಲು ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಮಾನ್ಯ ಸದಸ್ಯರು ಹೇಳಿದಂತೆ, ನಮ್ಮ ಮೈಸೂರು ಪ್ರಾಂತ್ಯದ ಜನರಿಗೆ ಮತ್ತು ಶೋರಾಪುರದ ಜನರಿಗೆ ಹೆಚ್ಚು ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ಕಟ್ಟಲು ನಿರ್ಣಯ ತೆಗೆದುಕೊಂಡದ್ದು. ಆ ಕೆಲಸ ಬೇಗನೇ ಶುರು ಆಗುತ್ತದೆಂದು ತಿಳಿದುಬಂದಿದೆ.

ಶ್ರೀ ಶಿದ್ದಯ್ಯ ಕಾಶೀಮಠ.—ಹೊಸ ಚೌಲ್ಟ್ರಿಗಳನ್ನು ಕೇವಲ ವಾರಣಾಸಿ ಮುಂತಾದ ಕಡೆ ಗಳಲ್ಲಿ ಕಟ್ಟುವುದಲ್ಲದೆ, ನಮ್ಮ ರಾಜ್ಯದ ಸೌಂದತ್ತಿ, ದೇವರಗುಡಿ ಮುಂತಾದ ಕಡೆಗಳಲ್ಲಿ ಛತ್ರ ಗಳನ್ನು ಕಟ್ಟಲು ಸರ್ಕಾರ ಮನಸ್ಸು ಮಾಡಿದ್ದಾರೆಯೇ ?

ಶ್ರೀ ಎಚ್. ವಿ. ಕೌಜಲಗಿ.—ಸರ್ಕಾರ ದುಡ್ಡು ಖರ್ಚು ಮಾಡುವ ಮೊದಲು ಅಲ್ಲಿ ಆದಾಯ ಎಷ್ಟು ಬರುತ್ತದೆ, ಅದರಿಂದ ಎಷ್ಟು ಜನರಿಗೆ ಉಪಯೋಗವಾಗುತ್ತದೆ ಎಂಬುದನ್ನು ನೋಡ ಬೇಕಾಗುತ್ತದೆ. ತಾವು ಹೇಳಿದಂತೆ ಸರ್ಕಾರದ ದುಡ್ಡನ್ನು ಖರ್ಚು ಮಾಡತಕ್ಕಂಥದ್ದು ಸದ್ಯಕ್ಕೆ ಮುಂದಕ್ಕೆ ಹಾಕಲಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಛತ್ರಗಳನ್ನು ಕಟ್ಟುವುದು ಸ್ವಲ್ಪ ನಿಧಾನ ಮಾಡಿ ಕಾವೇರಿ ಕಣಿವೆಯಲ್ಲಿ ನೀರು ಒದಗಿಸತಕ್ಕ ಕಡೆ ಸರ್ಕಾರ ಗಮನ ಕೊಡಬೇಕಾಗಿರುವುದರಿಂದ, ಮುಖ್ಯ ಮಂತ್ರಿಯವರು ಇತ್ತ ಕಡೆ ಹೆಚ್ಚು ಗಮನ ಕೊಟ್ಟು ಛತ್ರಗಳನ್ನು ಕಟ್ಟಿಸುವುದನ್ನು ನಿಲ್ಲಿ ಸುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಈಗ ಯಾವುದೂ ಹೊಸದು ತೆಗೆದುಕೊಂಡಿಲ್ಲ. ಶ್ರೀಶೈಲ ಮಾತ್ರ ತೆಗೆದುಕೊಂಡಿದ್ದೇವೆ. ಬಾಕಿ ಎಲ್ಲಾ ಮುಂದಕ್ಕೆ ಹಾಕಿದ್ದೇವೆ. ಎಲ್ಲೆಲ್ಲಿ ಖರ್ಚು ಮಾಡು ತ್ತೇವೆ, ಅಲ್ಲಿ ಎಷ್ಟು ಆದಾಯ ಬರುತ್ತದೆಂಬುದನ್ನೂ ನೋಡಿಕೊಳ್ಳುತ್ತೇವೆ.

ಶ್ರೀ ಎಂ. ಮಲ್ಲಪ್ಪ.—ವಾರಣಾಸಿಯಲ್ಲಿ ಒಂದು ಛತ್ರ ಇದೆ. ಅಲ್ಲಿ ಇರತಕ್ಕ ಕೋಣೆಗಳು ಕಡಿಮೆ ಮತ್ತು ಸೌಕರ್ಯವೂ ಇಲ್ಲ. ಆದ್ದರಿಂದ ಅಲ್ಲಿ ಹೆಚ್ಚಿನ ಕೋಣೆಗಳನ್ನು ಒದಗಿಸಿ ಹೆಚ್ಚು ಸೌಕರ್ಯವನ್ನು ಒದಗಿಸುತ್ತೀರಾ ?

ಶ್ರೀ ಎಚ್. ವಿ. ಕೌಜಲಗಿ.—ಅಲ್ಲಿ ನಮ್ಮ ಜನ ಹೋಗುವಂಥವರು ಬಹಳ ಕಡಿಮೆ. ಮತ್ತು ಅಲ್ಲಿ ಈಗ ಒಂದು ಕರ್ಣಾಟಕ ಹೌಸ್ ಎಂದು ಕಟ್ಟಿದ್ದಾರೆ. ಅಲ್ಲಿ ತಕ್ಕ ಸೌಕರ್ಯ ಇದೆ. ಇದರಿಂದ ಬೇರೆ ಕಟ್ಟುವ ಅವಶ್ಯಕತೆ ಇಲ್ಲ.

ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ.—ಕೇವಲ ಉತ್ಪಾದನಾ ಬಾಬುಗಳಿಗೆ ಹಣ ಹಾಕಲು ಸರ್ಕಾರ ನಿಲುವು ತೆಗೆದುಕೊಂಡಿದೆಯೇ ?

ಶ್ರೀ ಎಚ್. ವಿ. ಕೌಜಲಗಿ.—ದೇವಸ್ಥಾನದಿಂದ ಬಂದಂತಹ ದುಡ್ಡು ಮತ್ತು ಪಬ್ಲಿಕ್ ಕಂಟ್ರಿಬ್ಯೂಷನ್—ಇದರಿಂದ ನಾವು ಛತ್ರಗಳನ್ನು ಕಟ್ಟಿಸುತ್ತಿದ್ದೇವೆ ; ಅಷ್ಟೆ.

Land acquired at Bookinakere

65. Sri M. K. BOMME GOWDA (K.R. Pet).—

Will the Minister for Revenue be pleased to state :—

(*a*) whether the land acquired at Bookinakere, Krishnarajpet taluka, for allotment to the people of submerged areas under K.R. Sagar Project, has been allotted to them ;

(*b*) if not, the reasons for the delay ;